1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 93/2022

ದಿನಾಂಕ ಃ 04.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ: 2 ಪಿ. ಡಬ್ಲ್ಯೂ:5

| | |
|---|---|
| ಸಾಕ್ಷಿದಾರರ ಹೆಸರು | ಪಾಪಣ್ಣ |
| ತಂದೆಯ ಹೆಸರು | ಸಿದ್ದೇಗೌಡ |
| ವಯಸ್ಸು | 86 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಧನಗೂರು. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಸದರಿ ದಿವ್ಯಾಳ ಮದುವೆ ನಿಶ್ಚಿತಾರ್ಥ ವಿಚಾರದಲ್ಲಿ ನನ್ನನ್ನು ಧನಗೂರಿನಲ್ಲಿ ಇರುವ ಪ್ರಾಸಾ.1 ರವರ ಮನೆಗೆ ಕರೆಸಿದ್ದರು. ಸದರಿ ಮಾತುಕತೆಯಲ್ಲಿ ಮಾದೇಗೌಡ, ನಾನು, ಮರೀಗೌಡ, ಶೇಖರ ರವರು ದಿವ್ಯಾಳ ಕಡೆಯಿಂದ ಇದ್ದೆವು. ಮಾತುಕತೆಯಲ್ಲಿ 80 ಗ್ರಾಂ ಚಿನ್ನ, ರೂ. 80,000/- ನಗದು , ಮದುವೆ ಖರ್ಚನ್ನು ದಿವ್ಯಾಳ ಮನೆಯವರು ನೀಡಬೇಕು ಎಂದು ಮಾತುಕತೆ ಆಗಿತ್ತು. 80 ಗ್ರಾಂ ಚಿನ್ನವನ್ನು ಕೇಳಿದ್ದರ ಮೇರೆಗೆ ಸದರಿ ದಿವ್ಯಳ ಕುಟುಂದವರು 80 ಗ್ರಾಂ ಚಿನ್ನವನ್ನು ಹುಡುಗನಿಗೆ ನೀಡಿದ್ದರು. ಸದರಿ ಮದುವೆಯಾದಾಗ ಸದರಿ ಚಿನ್ನ, ನಗದು ಹಣವನ್ನು ನೀಡಲಾಗಿತ್ತು.
2. ದಿವ್ಯಾಳ ಮದುವೆಯಾದ ನಂತರ, ಸದರಿ ದಿವ್ಯಾಳು ಅಳಸಹಳ್ಳಿಯಲ್ಲಿ ಇರುವ ಆಕೆಯ ಗಂಡನ ಮನೆಯಲ್ಲಿ ವಾಸಿಸುತ್ತಿದ್ದಳು. ಸದರಿ ದಿವ್ಯಾಳ ಗಂಡ ವ್ಯವಸಾಯ ಹಾಗೂ ವ್ಯಾಪಾರ ಮಾಡುತ್ತಿದ್ದನು. ಸದರಿ ಮದುವೆಯಾಗಿ 6 ರಿಂದ 7 ತಿಂಗಳಲ್ಲಿ ದಿವ್ಯಾಳು ಅಳಸಹಳ್ಳಿಯಲ್ಲಿ ಇರುವ ಆಕೆಯ ಗಂಡನ ಮನೆಯಿಂದ ತನ್ನ ತಂದೆಯ ಮನೆಗೆ ಬಂದಿದ್ದಳು. ಸದರಿ ದಿವ್ಯಾಳು ತನ್ನ ತಂದೆಯ ಮನೆಯಲ್ಲಿ ಮೃತಳಾಗಿದ್ದಳು. ನಂತರ ನಾವು ಸದರಿ ದಿವ್ಯಾಳ ಗಂಡನನ್ನು ಕರೆಸಿ ವಿಚಾರಿಸಿದಾಗ, ತಾನೇನು ಮಾಡಿಲ್ಲವೆಂದು ಆತನು ಹೇಳಿದ್ದನು. ಸದರಿ ಸಮಯದಲ್ಲಿ ಸದರಿ ದಿವ್ಯಾಳ ಗಂಡನಿಗೆ ನೀಡಿದ್ದ ಒಡವೆಗಳನ್ನು ವಾಪಸ್ಸು ಮಾಡುತ್ತೇನೆ ಎಂದು ಹೇಳಿದ್ದನು.

3. ದಿವ್ಯಾ ಳಿಗೆ ಆಕೆಯ ಗಂಡ ಹೊಡೆದು ಬಡಿದು ಮಾಡಿರಬೇಕು, ಸದರಿ ದಿವ್ಯಾಳು ತನ್ನ ತಂದೆಯ ಮನೆಗೆ ಬಂದು ಮೃತಳಾಗಿರುತ್ತಾಳೆ. ನಾನು ಪೊಲೀಸರಿಗೆ ಪ್ರತ್ಯೇಕ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

4. ದಿವ್ಯಾಳ ಗಂಡ ದಿವ್ಯಾಳಿಗೆ ಹೆಚ್ಚಿನ ವರದಕ್ಷಿಣೆ ತರಲಿಲ್ಲ ಎಂದು ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದ ಕಾರಣ, ದಿವ್ಯಾಳು ಆಕೆಯ ತಂದೆಯ ಮನೆಗೆ ಬಂದು ಆತ್ಮಹತ್ಯೆ ಮಾಡಿಕೊಂಡಳು ಎಂದರೆ ಸಾಕ್ಷಿಯು, ಒಂದು ಬಾರಿ ಮಾನಸಿಕ ಹಿಂಸೆ ನೀಡುತ್ತಿದ್ದ ಬಗ್ಗೆ ಆಕೆ ಹೇಳಿದ್ದಳು ಎಂದು ನುಡಿಯುತ್ತಾರೆ. ಇದೇ ಕಾರಣದಿಂದ ಸದರಿ ದಿವ್ಯಾಳು ಆತ್ಮಹತ್ಯೆ ಮಾಡಿಕೊಂಡಳು ಎಂದರೆ ಸಾಕ್ಷಿಯು, ಸದರಿ ದಿವ್ಯಾಳ ಗಂಡ ಹೊಡೆದು ಬಡಿದು ಏನೋ ಮಾಡಿರುತ್ತಾನೆ, ಸದರಿ ದಿವ್ಯಾಳು ನಂತರ ತನ್ನ ತಂದೆ ಮನೆಗೆ ಬಂದು ನೇಣು ಹಾಕಿಕೊಂಡಿದ್ದಳು ಎಂದು ನುಡಿಯುತ್ತಾರೆ.

5. ನ್ಯಾಯಾಲಯದ ಮುಂದೆ ಇರುವ ಆರೋಪಿಯು ದಿವ್ಯಾಳ ಗಂಡ ಎಂದರೆ ಸರಿ.

<u>**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಹೆಚ್ ಎಂ ಎಲ್ ವಕೀಲರಿಂದ ಃ**</u>

ನ್ಯಾಯಾಲಯದ ಮಧ್ಯಾಹ್ನದ ಸಮಯವಾದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಮಧ್ಯಾಹ್ನ 2.45 ಕ್ಕೆ ಮುಂದೂಡಲಾಗಿದೆ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 93/2022

ದಿನಾಂಕ ಃ 04.03.2026 ರಂದು ಮಧ್ಯಾಹ್ನ 4.00 ಗಂಟೆಗೆ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಗಿದೆ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಹೆಚ್ ಎಂ ಎಲ್ ವಕೀಲರಿಂದ ಃ**

ಶ್ರೀ ಹೆಚ್ ಎಂ ಎಲ್ ವಕೀಲರು ಸಮಯಾವಕಾಶ ಕೋರುತ್ತಿದ್ದು ಸಕಾರಣಗಳು ಇಲ್ಲದೇ ಇರುವುದರಿಂದ ಆರೋಪಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ .

**ಮರು ವಿಚಾರಣೆ** ಃ ಇರುವುದಿಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.